## ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ಹಾವೇರಿ.

## ಸಿ.ಸಿ. ನಂ. **1104/2023**

ಡಿ.ಡಬ್ಲ್ಯೂ- 2

| | | |
|---|---|---|
| ಹೆಸರು | : | ಶಿವಪ್ಪ ಅರಗಂಜಿ |
| ತಂದೆಯ ಹೆಸರು | | ಮುರಗೆಪ್ಪ |
| ವಯಸ್ಸು | : | **70** ವರ್ಷ |
| ಉದ್ಯೋಗ | | ವ್ಯವಸಾಯ |
| ವಾಸಸ್ಥಳ | : | ಸಾಃ ದೇವಗಿರಿ, ಹಾವೇರಿ. |

ದಿನಾಂಕಃ **28-02-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ **ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಎಸ್.ಪಿ.ಎಸ್., ಆರೋಪಿ ಪರ ವಕೀಲರಿಂದಃ

ಹೊಲಕ್ಕೆ ಸಂಬಂಧಿಸಿದಂತೆ ಸಂಚಗಾರ ಪತ್ರವನ್ನು ಸ್ವಾಮಿಯವರಿಗೆ ಆರೋಪಿಗೆ ಬರೆದುಕೊಟ್ಟು, ರೂ. 2.00 ಲಕ್ಷ ಹಣವನ್ನು ಪಡೆದುಕೊಂಡಿರುತ್ತಾರೆ. ಮುಂದೆ ಚೆಕ್ ಕೊಟ್ಟು ಕೈಗಡ ಸಾಲ ಪಡೆದುಕೊಂಡಿರುತ್ತಾರೆ. ಮುಂದೆ ಹಣವನ್ನು ಕೊಡುವಂತೆ ಕೇಳಿದ್ದು, ಸ್ವಾಮೀಯವರು ಕೊಟ್ಟಿರುವುದಿಲ್ಲ, ಆಗ ರೂ. 5.00 ಲಕ್ಷ ಹಣವನ್ನು ಸ್ವಾಮೀಯವರಿಗೆ ಹಿಂತಿರುಗಿಸಿರುತ್ತಾರೆ. ಬಡ್ಡಿ ಹಣ ಕೊಡುವಂತೆ ಸ್ವಾಮೀಯವರು ಆರೋಪಿಗೆ ಕೇಳಿದಾಗ ಇಲ್ಲಾ ಅಂತಾ ಹೇಳಿದ್ದು, ಆರೋಪಿಯ ಚೆಕ್ ಅವರ ಬಳಿ ಇರುತ್ತದೆ. ಬ್ಯಾಂಕ್ ಮರ್ಜ ಆಗಿದ್ದರಿಂದ ಆ ಚೆಕ್ ಉಪಯೋಗ ಇಲ್ಲಾ ಅಂತಾ ತಿಳಿದು ಬಿಟ್ಟು ಬಿಟ್ಟಿರುತ್ತಾರೆ.

ಪಾಟೀ ಸವಾಲುಃ ಶ್ರೀ ವಿ.ಎ.ಜಿ.ಹೆಚ್. ಫಿರ್ಯಾದಿ ಪರ ವಕೀಲರಿಂದಃ

ನೀವು ಬೇರೆ ಪ್ರಕರಣಗಳಲ್ಲಿ ಸಾಕಷ್ಟು ಸಾಕ್ಷಿ ಹೇಳಿದ್ದೀರಿ ಅಂದರೆ ಇಲ್ಲಾ. ನನಗೆ ಸಮನ್ಸ ಬಂದಿರುವುದಿಲ್ಲ, ಸಾಕ್ಷಿ ಇದೆ ಬಾ ಅಂತಾ ಹೇಳಿರುತ್ತಾರೆ. ಆರೋಪಿ ನನಗೆ ಪರಿಚಯಸ್ಥ ಇರುತ್ತಾರೆ. ಆರೋಪಿ ಪರಿಚಯಸ್ಥರಿರುವುದರಿಂದ ಅವರ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ ಅಂದರೆ ಸರಿಯಲ್ಲ. ಫಿರ್ಯಾದಿದಾರರ ಸರಿಯಾದ ವಿಳಾಸ, ಹೆಸರು ನಿಮಗೆ ಹೇಳಲು ಬರುವುದಿಲ್ಲ ಅಂದರೆ, ಫಿರ್ಯಾದಿದಾರರ

ಹೆಸರು ನಾಗಯ್ಯ ಹಿರೇಮಠ ಅಂತಾ ಇರುತ್ತದೆ. ಫಿರ್ಯಾದಿದಾರರ ಬಗ್ಗೆ ನಿಮಗೆ ಮಾಹಿತಿ ಇರುವುದಿಲ್ಲ. ಫಿರ್ಯಾದಿದಾರರು ಅಂದರೆ ನಾಗಯ್ಯ ಅಲ್ಲಾ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಫಿರ್ಯಾದಿದಾರರು ಆರೋಪಿಗೆ ಸಂಚಗಾರ ಪತ್ರ, ಯಾವ ತಾರೀಖು, ಯಾವ ದಿವಸ, ಯಾವ ತಿಂಗಳು ಮಾಡಿಕೊಟ್ಟಿರುತ್ತಾರೆ ಅಂದರೆ 2015-2016 ರಲ್ಲಿ ಮಾಡಿ ಕೊಟ್ಟಿರುತ್ತಾರೆ, ಆದರೆ ತಿಂಗಳು, ದಿನಾಂಕ ಹೇಳಲು ಬರುವುದಿಲ್ಲ. ನನಗೆ ಒಂದು ಪತ್ರ ನೋಂದಣಿಯಾಗಿರುವುದು ಮಾತ್ರ ಗೊತ್ತಿರುತ್ತದೆ. ಹೊಸಳ್ಳಿ ಗ್ರಾಮದ ಸರ್ವೆ ನಂಬರ 16/1, ಕ್ಷೇತ್ರ ಗೊತ್ತಿರುವುದಿಲ್ಲ. ನೀವು ಹೇಳಿದಂತೆ ಸಂಚಗಾರ ಪತ್ರ ನೋಂದಣಿ ಯಾಗಿರುವುದಿಲ್ಲ, ಆರೋಪಿಯೊಂದಿಗೆ ಸೇರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಆರೋಪಿ ನಿಮಗೆ ಬೇಕಾದವರು ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಕೈಗಡ ಸಾಲವಾಗಿರುವುದರಿಂದ ಬಡ್ಡಿ ಬರುವುದಿಲ್ಲ ಅಂದರೆ ಹೌದು. ಅದು ಸ್ನೇಹದಿಂದ ಮಾಡಿದ ವ್ಯವಹಾರ ಅಂದರೆ ಹೌದು ಹಾಗೆಯೇ ಹಣ ಕೊಟ್ಟಿರುತ್ತಾರೆ.

**2.** ಆರೋಪಿ ಫಿರ್ಯಾದಿದಾರರಿಂದ ರೂ.9.00 ಲಕ್ಷ ಹಣ ಪಡೆದಿರುತ್ತಾರೆ ಅಂದರೆ ಸರಿಯಲ್ಲ, ಆದರೆ ರೂ. 5.00 ಲಕ್ಷ ಪಡೆದಿರುತ್ತಾರೆ. ಅದನ್ನು ಮರುಪಾವತಿ ಮಾಡುತ್ತೇನೆ ಅಂತಾ ಹೇಳಿ ಚೆಕ್ ನೀಡಿದ್ದು, ಅದು ಅಮಾನ್ಯವಾಗಿರುವ ಕಾರಣ ಈ ಪ್ರಕರಣ ದಾಖಲು ಮಾಡಿರುತ್ತಾರೆ ಅಂದರೆ ವಿಚಾರಣೆ ನಡೆಯುತ್ತಿದೆ. ಈ ಪ್ರಕರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡಾ ಆರೋಪಿ ನಿಮ್ಮ ಸ್ನೇಹಿತನಾಗಿದ್ದರಿಂದ ಅವರಿಗೆ ಸಹಾಯವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.
-ಸಹಿ-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.